ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, the 29th March 1972

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

CALLING ATTENTION TO A MATTER OF URGENT PUBLIC IMPORTANCE.

re: **Acute Scarcity of Drinking Water Supply in Chitradurga Town.**

Sri C. R. MOHAMED SAIFUDDIN (Chitradurga).—Madam, I call the attention of the Hon. Minister for Municipal Administration and Housing to a matter of urgent public importance regarding the acute scarcity of drinking water supply in Chitradurga Town.

Sri C. M. ARUMUGHAM (Kolar gold fields).—I submit to the Chair that the water problem not only pertains to Chitradurga but there is scarcity of water throughout the State. I therefere submit that other hon. members may also be given opportunities to put questions on this subject.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಮತ್ತು ವಸತಿಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಈ ಸಭೆಯ ಮುಂದೆ ಮಂಡಿಸಿರತಕ್ಕ ಒಂದು ಅಂಶ ಸತ್ಯಾಂಶದಿಂದ ಕೂಡಿದೆ. ಚಿತ್ರದುರ್ಗ ಟೌನಿನ ಜನಸಂಖ್ಯೆ ಸುಮಾರು 45 ಸಾವಿರ ಇದೆ. ಇಷ್ಟೊಂದು ಜನಸಂಖ್ಯೆಗೆ ಈಗ ಒದಗಿಸುತ್ತಿರುವ ನೀರು ಸಾಕಾಗುತ್ತಿಲ್ಲವೆಂಬುದು ಮಾನ್ಯಸದಸ್ಯರ ಶಂಕೆಯಾಗಿದೆ. ಈಗ ಬೋರ್ ವೆಲ್ಸ್ ಮೂಲಕ ಮತ್ತು ಸರ್‌ಫೇಸ್ ವಾಟರ್ ಸೋರ್ಸಸ್ ಮೂಲಕ ಈ 4.70 ಲಕ್ಷ ಗ್ಯಾಲನ್ ನೀರನ್ನು ದಿನವೂ ಸರಬರಾಜು ಮಾಡಲಾಗುತ್ತಿದೆ. ಆದರೂ ನೀರಿನ ಕೊರತೆ ಇದೆ. ಈ ಕೊರತೆಯನ್ನು ನಿವಾರಿಸುವುದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತಿದೆ. ಕಳೆದ ಒಂದು ವಾರದಿಂದ ನೀರಿನ ಕೊರತೆ ಸ್ವಲ್ಪ ಜಾಸ್ತಿಯಾಗಿದೆ. ಮಾನ್ಯ ಸದಸ್ಯರು ಈ ಬಗ್ಗೆ ಕೆಲವು ವಿಷಯಗಳನ್ನು ಮೊದಲು ತಿಳಿದುಕೊಳ್ಳಬೇಕು. ಏನೆಂದರೆ.....

Sri M. S. KRISHNAN (Malleswaram).—When a call attention notice is given we expect the Hon. Minister to make a statement. But he is making a speech.

Sri H. D. DEVE GOWDA (Holenarsipur).—Madam, the Legislature Secretariat must secure a copy of the statement that is going to be made by the Hon. Minister.

MADAM SPEAKER.—Copy of the statement has already been secured.

Sri B. B. SAYANAK (Belgaum).—The Hon. Minister must read out the statement first and when clarifications are asked for he may reply to them.

ಶ್ರೀ ಬಿ. ಬಸವಲಿಂಗಪ್ಪ.—ಸ್ಟೇಟ್‌ಮೆಂಟನ್ನು ಕೊಡಲಾಗಿದೆ. ಅದರ ಬಗ್ಗೆ ಕೆಲವು ವಿವರಗಳನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ತಾವು ಮೊದಲು ಸ್ಟೇಟ್‌ಮೆಂಟ್ ಓದಿ. ನಂತರ ಮಾನ್ಯ ಸದಸ್ಯರು ಏನಾದರು ಪ್ರಶ್ನೆಗಳನ್ನು ಕೇಳಿದರೆ ಆವುಗಳಿಗೆ ಆಗ ವಿವರಗಳನ್ನು ಕೊಡಿ.

Sri B. BASAVALINGAPPA.—The present population of Chitradurga Town is 45, 000. The existing water supply to the Town is from bore wells and also from a surface source viz., Thimmannanayakanakere. The supply through the bore wells is about 3.00 lakh gallons per day and that through the tank is 0.50 lakh gallons per day. The total supply thus is about 3.50 lakh gallons per day.

Looking to the shortage of water, an emergency water supply scheme was sanctioned and has been completed on 6th March 1972 Four bore wells have been sunk under this emergency water supply scheme. Pumpsets have been fitted for these bore wells and are working satisfactorily These bore wells give additional water of 1.2 lakh gallons per day. The total quantity of water that is being now supplied amounts to 4.70 lakhs gallons per day. After commissioning the emergency water supply scheme, the per capita rate of supply has been increased from 8.00 gallons to 10.50 gallons.

Chitradurga Municipality has four tractors, out of which three tractors are being used for supply of drinking water to places where the citizens have not taken house connections and there is no shortage of machinery for water supply. The position as regards spare parts for machinery is also satisfactory. The position of water supply at present is satisfactory.

With a view to have a permanent solution to the problem of water supply to the Chitradurga Town, Government have sanctioned comprehensive water supply scheme to the Town at an estimated cost of Rs. 98.8 lakhs, with Vedavati River near Hiriyur as source. An amount of Rs. 90.00 lakhs has already been spent on the scheme and the scheme is expected to be completed by June 1972.

The water supply to the Town will improve after completion of the comprehensive water supply scheme.

ಶ್ರೀ ಸಿ. ಆರ್. ಮಹಮ್ಮದ್ ಸೈಫುದ್ದೀನ್.—ಸ್ವಾಮಿ, ಹಿಂದೆ ಚಿತ್ರದುರ್ಗ ಟೌನಿನಲ್ಲಿ ನೀರು ಬಹಳ ಚೆನ್ನಾಗಿ ಸಪ್ಲೈ ಆಗುತ್ತಿತ್ತು. ಈಗ ಚಿತ್ರದುರ್ಗ ಟೌನಿನ ಜನಸಂಖ್ಯೆ 61 ಸಾವಿರ ಇದೆ. ಇಷ್ಟು ಜನಸಂಖ್ಯೆ ಇರುವ ಚಿತ್ರದುರ್ಗ ಟೌನಿಗೆ ವಾಟರ್ ಸಪ್ಲೈ ಸರಿಯಾಗಿ ಆಗುತ್ತಿಲ್ಲ. ಒಂದು ದಿನಕ್ಕೆ ಒಬ್ಬರಿಗೆ ಒಂದು ಕೊಡ ನೀರು ಸಿಕ್ಕುವುದು ಕಷ್ಟವಾಗಿದೆ. ಹೀಗಿರುವಾಗ ಕಾಂಪ್ರೆಹೇನ್ಸಿವ್ ವಾಟರ್ ಸಪ್ಲೈ ಸ್ಕೀಮು ಯಾವ ಸ್ಟೇಜಿನಲ್ಲಿದೆ, ಇದನ್ನು ಯಾವಾಗ ಪೂರೈಸುತ್ತೀರಿ, ಏತಕ್ಕೆಂದರೆ

ಈಗ ಎರಡು ತಿಂಗಳಿಂದ ಚಿತ್ರದುರ್ಗ ಟೌನಿನ ವಾಟರ್ ಸಪ್ಲೈಗೆ ಸಂಬಂಧಪಟ್ಟ ಕೆಲಸ ನಿಂತು ಹೋಗಿದೆ. ಅದಕ್ಕೆ ಬೇಕಾದ ಪೆಷನರಿ ಕೂಡ ಸಪ್ಲೈ ಆಗಿಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಬೇರೆ ಯಾವ ಅನುಕೂಲತೆಗಳು ಇಲ್ಲದೆ ಹೋದರೂ ಕೂಡ ಜನಗಳಿಗೆ ಕುಡಿಯುವುದಕ್ಕೆ ಒಬ್ಬೊಬ್ಬರಿಗೆ ಒಂದು ಕೊಡ ನೀರು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು. ಆದ್ದರಿಂದ ತಾವು ದಯವಿಟ್ಟು ಇನ್ನು 3—4 ದಿವಸಗಳಲ್ಲಿ ಚಿತ್ರದುರ್ಗ ಟೌನಿಗೆ ಸರಿಯಾಗಿ ಕುಡಿಯುವ ನೀರಿನ ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರೆಂದು ಭರವಸೆ ಕೊಡುತ್ತೀರಾ ?

ಶ್ರೀ ಬಸವಲಿಂಗಪ್ಪ.—ಕಾಂಪ್ರೆಹೆನ್ಸಿವ್ ವಾಟರ್ ಸಪ್ಲೈ ಸ್ಕೀಮ್ಯ ಏನಿದೆ ಅದನ್ನು ಜೂನ್ ತಿಂಗಳ ಒಳಗಾಗಿ ಪೂರೈಸುತ್ತೇವೆ. ಈಗ ಕುಡಿಯುವ ನೀರಿನ ಕೊರತೆ ಏನಿದೆ ಅದನ್ನು ಪೂರೈಸುವುದಕ್ಕೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ವಾಟರ್ ಸಪ್ಲೈ ಸ್ಕೀಂ ಬಗ್ಗೆ ಒಂದು ಕಾಂಪ್ರೆಹೆನ್ಸಿವ್ ಸ್ಕೀಮ್ ಇದೆಯೆಂದು ಹೇಳಿದಿರಿ. ಇದರ ಬಗ್ಗೆ ಏನಾದರೂ ವಿವರಗಳನ್ನು ಕೊಡುವುದಕ್ಕೆ ಆಗುತ್ತದೆಯೇ ? ಈ ಯೋಜನೆ ಎಷ್ಟು ದಿವಸಗಳಲ್ಲಿ ಬರುತ್ತದೆ, ಈ ಯೋಜನೆಯಲ್ಲಿ ಎಷ್ಟು ಗ್ರಾಮಗಳಿಗೆ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ, ಮತ್ತು ಎಷ್ಟು ಮುನಿಸಿಪಾಲಿಟಿಗಳಿಗೆ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಏತಕ್ಕೆಂದರೆ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಕೊರತೆ ಬಹಳ ಜಾಸ್ತಿ ಇದೆ. ಆದ್ದರಿಂದ ಇದರ ವಿಚಾರದಲ್ಲಿ ತಾವು ಏನು ಹೇಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಈ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

Sri C. M. ARUMUGHAM.—The hon. member says that the population of Chitradurga town is 61,000, whereas the Hon'ble Minister says that it is 45,000. May I know which is correct and according to which source the Minister says that it is 45,000 ? Is it according to recent census ?

ಶ್ರೀ ಬಿ. ಬಸವಲಿಂಗಪ್ಪ.—ಈಗ ನಮ್ಮಲ್ಲಿರುವ ರಿಕಾರ್ಡ್ಸ್ ಪ್ರಕಾರ ಚಿತ್ರದುರ್ಗ ಟೌನಿನ ಜನಸಂಖ್ಯೆ 45 ಸಾವಿರ ಇದೆ.

Constitution of Special Committee

Sri N. HUTCHAMASTHY GOWDA (Minister for Revenue).—On behalf of the Chief Minister, I beg to move :

> "That a Committee be constituted consisting of five members (three from the Assembly to be nominated by the Speaker and two from the Council) to look into the comforts and conveniences of the members pending constitution of the House Committee under the Rules".

MADAM SPEAKER.—Motion moved. I will put the motion to the Vote of the House. The question is :

> "That a Committee be constituted consisting of five members (three from the Assembly to be nominated by the Speaker and two from the Council) to look into the comforts and conveniences of the members pending constitution of the House Committee under the Rules."

The motion was adopted.

Appropriation Bills, 1972—Introduction

MADAM SPEKER.—The Governor has recommended the introduction of the two Appropriation Bills before the House. The Hon'ble Finance Minister may introduce the Bills.

Sri M. Y. GHORPADE (Minister for Finance).—I beg to introduce the following Bills:—

(i) The Mysore Appropriation Bill, 1972,

(ii) The Mysore Appropriation (Vote on Account) Bill, 1972.

MADAM SPEAKER.—These Bills are introduced.

Sri T. R. SHAMANNA.—Many of the members are new. So, it will be helpful if the Hon'ble Finance Minister gives some clarifications regarding these bills, so that the new members might know the implications.

Sri M. Y. GHORPADE (Minister for Finance).—There are no implications; we have fully discussed. The rules demand that it should be moved in the form of an Appropriation Bill. There is no new element involved; it is purely procedural.

Mysore Appropriation Bill, 1972—Motion to consider

Sri M. Y. GHORPADE (Minister for Finance).—I beg to move:

"That the Mysore Appropriation Bill, 1972, be taken into consideration."

MADAM SPEAKER.—Motion moved:

"That the Mysore Appropriation Bill, 1972, be taken into consideration".

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ನಥೆಯುಮುಂದೆ ಇರತಕ್ಕ ಎರಡು ಅಪ್ರೊಪ್ರಿಯೇಷನ್ ಮಸೂದೆಗಳ್ಗೇನಿವೆ ಇದರ ಬಗ್ಗೆ ನಾನು ಹೆಚ್ಚು ಮಾತನಾಡ ತಕ್ಕ ಪ್ರಮೇಯವೇನೂ ಇಲ್ಲ ಎಂದು ಕಾಣುತ್ತದೆ. ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಬಯಸುವುದೂ ಇಲ್ಲ. ಆದರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮಾತ್ರ ನಾನು ಮಾನ್ಯ ಅಧ್ಯಕ್ಷಿಣಿಯವರ ಮುಖಾಂತರ ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಗುಲ್ಬರ್ಗಾದಲ್ಲಿ 18 ಜನ ನೌಕರರನ್ನು ಮಾಚಿ 31 ರಲ್ಲಿ ರಿಟ್ರೆಂಚ್ ಮಾಡುತ್ತಾರೆ ಎಂದು ನನಗೆ ಅಲ್ಲಿಂದ ಟೆಲಿಗ್ರಾಂ ಬಂದಿದೆ. ಅದನ್ನು ನಾನು ಮಾನ್ಯ ಅಧ್ಯಕ್ಷಿಣಿಯವರ ಮುಖಾಂತರ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದನ್ನು ದಯವಿಟ್ಟು ವಿಚಾರ ಮಾಡಬೇಕು. ಈಗ 18 ಜನ ನೌಕರರನ್ನು ಗುಲ್ಬರ್ಗಾದಲ್ಲಿ ಏನು ರಿಟ್ರೆಂಚ್ ಮಾಡಬೇಕೆಂದಿದ್ದಾರೆ ಅವರು ಪಿ.ಎಸ್.ಸಿ. ಕ್ಯಾಂಡಿಡೇಟ್ಸ್. ಈಗ ಅವರನ್ನು ರಿಟ್ರೆಂಚ್ ಮಾಡುವುದರಿಂದ ಅವರ ಸರ್ವೀಸ್ ಬ್ರೇಕಾಗುತ್ತದೆ. ಅವರಿಗೆ ಕಂಟಿನ್ಯುಟಿ ಆಫ್ ಸರ್ವೀಸ್ ಸಿಕ್ಕುವುದಿಲ್ಲ. ಆದ್ದರಿಂದ ಈ ಬಗ್ಗೆ

† Indicates that remarks or speeches have not been revised by the member concerned.